ಸ್ವರ್ಣಮುದ್ರೆಯನ್ನು ಹಿಂದಿರುಗಿಸಿದ. ಕೆಲವು ದಿವಸಗಳ ನಂತರ ಅರಮನೆಯ ಇಬ್ಬರು ದಾಸಿಯರು ಜಗಳವಾಡುತ್ತಿರುವುದನ್ನು ಚಿಂತನ್ ನೋಡಿದ. ಅವನಿಗೆ ಭಾವೇಶನಿಗೆ ತಾನು ಕೊಟ್ಟ ಮಾತು ನೆನಪಾಯಿತು. ಅವರು ಜಗಳವಾಡುತ್ತಿರುವುದನ್ನು ನೋಡುತ್ತ ಅವನು ನಿಂತುಕೊಂಡ.

ತನ್ನ ಅರಮನೆಯ ಇಬ್ಬರು ದಾಸಿಯರು ಜಗಳವಾಡುತ್ತಿರುವ ವಿಷಯ ಅರಸನ ಕಿವಿಯವರೆಗೂ ಹೋಯಿತು. ಅರಸನು ಆ ಇಬ್ಬರು ದಾಸಿಯರನ್ನು ಕರೆಸಿ ವಿಚಾರಣೆ ನಡೆಸಿದ. ನಿಮ್ಮಿಬ್ಬರಲ್ಲಿ ಯಾರು ಮೊದಲು ಜಗಳ ಆರಂಭಿಸಿದ್ದು ಎಂದು ಅರಸನು ದಾಸಿಯರನ್ನು ಕೇಳಿದಾಗ ನಾನಲ್ಲ, ನಾನಲ್ಲ ಎಂದು ಇಬ್ಬರೂ ಹೇಳಿದರು. ಬೇಕಾದರೆ ನೀವು ನಮ್ಮ ಜಗಳ ನೋಡುತ್ತ ನಿಂತ ಚಿಂತನ್‌ನನ್ನು ಕರೆಸಿ ವಿಚಾರಿಸಿ ಎಂದು ಇಬ್ಬರೂ ಹೇಳಿದರು.

ಅರಸನು ಚಿಂತನ್‌ನನ್ನು ಕರೆಸಿ ಜಗಳವನ್ನು ಮೊದಲು ಯಾರು ಆರಂಭಿಸಿದರು ಎಂದು ಕೇಳಿದನು. ಆಗ ಇಬ್ಬರು ದಾಸಿಯರು ತನ್ನ ಪಕ್ಷವನ್ನು ವಹಿಸಿಕೊಳ್ಳುವಂತೆ ಚಿಂತನ್‌ನ ಮೇಲೆ ಒತ್ತಡ ಹೇರತೊಡಗಿದರು. ಇದರಿಂದ ಗಾಬರಿಗೊಂಡ ಚಿಂತನ್ ಅಲ್ಲಿಂದ ಓಡಿ ಭಾವೇಶನ ಬಳಿಗೆ ಬಂದು ನಡೆದುದೆಲ್ಲವನ್ನು ಅವನಿಗೆ ತಿಳಿಸಿದ. ಆಗ ಭಾವೇಶನು 'ನೀನು ನನ್ನಿಂದ ಬುದ್ಧಿಯನ್ನು ಕೊಂಡುಕೊಂಡ ಘಟನೆಯಿಂದ ಆರಂಭಿಸಿ ನಡೆದುದೆಲ್ಲವನ್ನು ಅರಸನಿಗೆ ತಿಳಿಸಿಬಿಡು' ಎಂದು ಹೇಳಿದ ಚಿಂತನ್ ಹಾಗೆಯೇ ಮಾಡಿದ. ಅರಸ ಎಲ್ಲವನ್ನೂ ಕೇಳಿ ಜೋರಾಗಿ ನಕ್ಕು ನಿನ್ನ ಗೆಳೆಯ ಬುದ್ಧಿವಂತನಂತೆ ತೋರುತ್ತಾನೆ ಅವನನ್ನು ನನ್ನ ಬಳಿಗೆ ಕರೆದುಕೊಂಡು ಬಾ ಎಂದು ಹೇಳಿದ.

ಮರುದಿನ ಚಿಂತನ ಭಾವೇಶನನ್ನು ಅರಸನ ಬಳಿಗೆ ಕರೆದುಕೊಂಡು ಹೋದ. ಅರಸ ಭಾವೇಶನನ್ನು ಕುರಿತು ನನಗೂ ಸ್ವಲ್ಪ ಬುದ್ಧಿಯನ್ನು ಕೊಡು ಎಂದು ಕೇಳಿದ. ಭಾವೇಶ ಒಂದು ಕಾಗದದ ಮೇಲೆ ಅದೇನನ್ನೋ ಬರೆದು ಅರಸನ ಕೈಗೆ ಕೊಟ್ಟ. ಅದರಲ್ಲಿ ಏನನ್ನಾದರೂ ಮಾಡುವ ಮೊದಲು ಅದರ ಬಗ್ಗೆ ತುಂಬ ಆಳವಾಗಿ ಯೋಚಿಸಬೇಕು' ಎಂದು ಬರೆದಿತ್ತು.

ಕೆಲವು ದಿವಸಗಳ ನಂತರ ಅರಸ ಕಾಯಿಲೆ ಬಿದ್ದ. ಮಂತ್ರಿಯು ಅರಸನನ್ನು ಕೊಲ್ಲಬೇಕೆಂಬ ಉದ್ದೇಶದಿಂದ ರಾಜವೈದ್ಯನಿಗೆ 'ನಾನು ನಿನಗೆ ಐದು ಸಾವಿರ ಸ್ವರ್ಣಮುದ್ರೆಗಳನ್ನು ನೀಡುತ್ತೇನೆ, ನೀನು ಅರಸನಿಗೆ ನೀಡುವ ಔಷಧಿಯಲ್ಲಿ ವಿಷವನ್ನು ಬೆರೆಸಬೇಕು' ಎಂದು ಹೇಳಿದ.

ರಾಜವೈದ್ಯ ತುಂಬಾ ಆಸೆಬುರುಕನಾಗಿದ್ದ. ಸ್ವರ್ಣ ಮುದ್ರೆಗಳ ಆಸೆಯಿಂದಾಗಿ ಅವನು ಅರಸನಿಗೆ ಕೊಡಬೇಕಾದ ಔಷಧಿಯಲ್ಲಿ ವಿಷವನ್ನು ಬೆರೆಸಿ ಅರಸನಿಗೆ ಕೊಡಲು ಹೋದ. ಔಷಧವನ್ನು ಕುಡಿಯುವ ಮೊದಲು ಅರಸ ರಾಜವೈದ್ಯನನ್ನು ಕುರಿತು ವೈದ್ಯರೇ ಬುದ್ಧಿಯನ್ನು ಮಾರುವ ಒಬ್ಬ ವ್ಯಕ್ತಿ ನಾವು ಏನನ್ನಾದರೂ ಮಾಡುವ ಮೊದಲು ಅದರ ಬಗ್ಗೆ ಆಳವಾಗಿ ಯೋಚಿಸಬೇಕು ಎಂದು ಹೇಳಿದ್ದ ಎಂದ.

ಅರಸನ ಮಾತನ್ನು ಕೇಳಿ ವೈದ್ಯ ಭಯಭೀತನಾದ. ನಮ್ಮ ಷಡ್ಯಂತ್ರ ಅರಸನಿಗೆ ತಿಳಿದಂತೆ ತೋರುತ್ತದೆ ಆದ್ದರಿಂದಲೇ ನನಗೆ ಎಚ್ಚರಿಕೆಯ ಮಾತನ್ನು ಹೇಳುತ್ತಿದ್ದಾನೆ ಎಂದು ಭಾವಿಸಿ, 'ಮಹಾರಾಜರೇ ನಾನು ಬಹಳ ದೊಡ್ಡ ತಪ್ಪನ್ನು ಮಾಡಿದ್ದೇನೆ, ದಯವಿಟ್ಟು ಕ್ಷಮಿಸಿ ಅರಸನ ಕಾಲಿಗೆ ಬಿದ್ದು ಬೇಡಿಕೊಂಡ.

ನಿಜವನ್ನು ಹೇಳಿದ್ದಕ್ಕಾಗಿ ಅರಸ ರಾಜ್ಯವೈದ್ಯನನ್ನು ಕ್ಷಮಿಸಿ ಮಂತ್ರಿಗೆ ಮರಣ ದಂಡನೆ ಶಿಕ್ಷೆಯನ್ನು ವಿಧಿಸಿದ. ■



ಶಶಿಧರ ಹಳೇಮನಿ

# ಗಾಂಧಿಯ ವೇಷ

ಒಂದುದಿನ ನಾ ಬಂದೆನು ಪೇಟೆಗೆ
ಗಾಂಧಿಯ ವೇಷದಲಿ
ಕೈಯಲಿ ಕೋಲು ಹಳೆ ಚಾಳೀಸು
ಹೊದ್ದಿಹ ಎರಡೆ ಬಟ್ಟೆಯಲಿ
ಗಾಂಧಿ ತಾತ ಬಂದನು ಇಲ್ಲಿ
ನಡೆಯಿರಿ ನಮಿಸುವ ನಾವು
ಬಂದಿತು ಹಿಂದೆ ಬಾಲರ ದಂಡು
ಒಗೆಯುತ ಚಿಣ್ಣಿದಾಂಡು
ಅರೆರೆರೆ ನೀನು ಬದುಕಿಹೆ ಏನು?
ಅಂದೆ ಕೊಂದರು ಎಂದರು ನಿನ್ನ
ಗೊಣಗುತ ಹಿರಿಯರು ಹಾಗೆ ನಡೆದರು.
ನಿನ್ನಯ ಭೋದನೆ ಅಪ್ಪಟ ಚಿನ್ನ
ಬದುಕಿಗಿಂತ ಸಾವೇ ಚೆನ್ನ
ತಕಲಿಯೆ ಇಲ್ಲಾ ನಕಲಿಯೆ ಎಲ್ಲಾ
ಟೊಂಕದೊಳಿಲ್ಲ ಗಡಿಯಾರ
ಒಂದೆ ಎರಡೇ ಅಪರಂಪಾರ
ನಿನ್ನಯ ಶಿಷ್ಯರ ಒಡಿವಾರ
ಸಿಡುಕುತ ನುಡಿದನು ಗಡ್ಡವ ನೀವುತ
ಎಂದಿಗೂ ನಿನ್ನ ಕ್ಷಮಿಸನು ಅಲ್ಲಾ
ಹಿಂದಿನ ಬೀದಿಯ ಅಬ್ದುಲ್ಲಾ
ಆರತಿ ಎತ್ತಿರೇ ರಾಷ್ಟ್ರದ ಪಿತನಿಗೆ
ರಾಷ್ಟ್ರದ ಕ್ಷೋಭೆಗೆ ಶಾಂತಿಯ ನೀಡಲು
ಬಂದನು ಮತ್ತೆ ಭೂಮಿಯಲಿ
ಎಂದಳು ಮುಗ್ಧೆ ಸುಮಂಗಲಿ
ಹೋಗೊ ಗಾಂಧಿ ಯಾತಕೆ ಬಂದಿ
ದೇಶವನೊಡೆಯಲು ಹಾಕಿದೆ ನಾಂದಿ
ಇನ್ನೂ ಇದ್ದರೆ ಮತ್ತುಪವಾಸ
ಸಾಕು ಭೂಮಿಯ ಸಹವಾಸ
ಎನ್ನುತ ಗದ್ದಲ ಎಬ್ಬಿಸುತ್ತಿದ್ದರು
ಬೀದಿಯ ತುದಿಯಲಿ ಕೆಲಮಂದಿ
ಕುಡಿಯಿರಿ ಕುಡಿಯಿರಿ ಮೇಕೆಯ ಹಾಲು
ಜೊತೆಗೆ ಕೊಡುವೆನು ಕಡಲೆಯ ಕಾಳು
ಕರೆದನು ಹತ್ತಿರ ಕುರುಬರ ಕುವರ
ನೆನೆಸುತ ಗಾಂಧಿಯ ಜೀವನ ಪ್ರವರ
ಅಲ್ಲೆ ಇದ್ದನು ಮುದಿಮುದಿ ಮುದುಕ
ಇತ್ತ ಗುಲಾಬಿ ಹೂವು
ಮಣ್ಣಿನ ದಿಬ್ಬವ ತೋರುತ ಹೇಳಿದ
ಇಲ್ಲೆ ನಿನ್ನಯ ಠಾವು
ಗಾಂಧಿ ತತ್ವವ ಹೆಡೆಮುರಿ ಕಟ್ಟಿ
ಹಾಕಿದರಿಲ್ಲಿ ಮಣ್ಣಿನೊಳು
ಕಾಯುತಲಿದ್ದೆನು ಬೇಲಿಯ ಕಟ್ಟಿ
ನೀರೂ ಇಲ್ಲ ಗಾಳಿಯೂ ಇಲ್ಲಾ
ಆದರೂ ಅರಳಿವೆ ಹೂವುಗಳು
ಕಡಿದರೂ ಹುಗಿದರೂ ಸಾಯದು ಮಾತ್ರ
ನಿಮ್ಮಯ ಏಕಾದಶ ಸೂತ್ರ
ಅದನೆ ಹೇಳುತ ನಿಂತಿಹೆ ನೋಡಿ
ಚಂದದ ವಾಸನೆ ಈ ಗುಲಾಬಿ
ಪುಣ್ಯವು ಬೇಕು ಸಿಗಬೇಕಿದ್ದರೆ
ಇದಕಿದೆ ದೊಡ್ಡ ಲಾಬಿ
ಬತ್ತಲೆಯಾದೆನು ವೇಷವ ಕಳಚಿ
ನಗುತಲಿ ನಿಂತಿದೆ ನಡುಬೀದಿ
ಕಳಚಿತು ಕೋಲು ನಡುಗಿತು ಕಾಲು
ಕಣ್ಣಿಗೆ ಕಾಣದು ಹಾದಿ
ಎಲ್ಲೆಲ್ಲು ಮಂಜಿನ ಬೀದಿ.

■ **ಪ.ಗ. ಭಟ್ಟ ಹರಾಹುರಿ**